ದಿನಾಂಕ: ಮಾರ್ಚ್ 08, 2014

# ಉದ್ಭವಿಸಿದ ಸ್ವಚ್ಛಂದ ರಾಜಕಾರಣಿ

-ಅರುಣ್ ಜೇಟ್ಲಿ
ವಿರೋಧ ಪಕ್ಷದ ನಾಯಕರು(ರಾಜ್ಯ ಸಭಾ)

ಈ ಚುನಾವಣಾ ಪರ್ವದಲ್ಲಿ ಸಕ್ರಿಯ ಪ್ರಚಾರಾಂದೋಲನ ಆರಂಭಿಸಿದ್ದೇವೆ. ರಾಜಕೀಯ ಪಕ್ಷಗಳು ಪ್ರಚಾರಾಂದೋಳನ, ಪಕ್ಷಗಳ ಹೊಂದಾಣಿಕೆ, ಅಭ್ಯರ್ಥಿಗಳ ಆಯ್ಕೆ ಹಾಗೂ ಚುನಾವಣಾ ತಂತ್ರಗಾರಿಕೆಯನ್ನು ರೂಪಿಸುವಲ್ಲಿ ವ್ಯಸ್ತವಾಗಿವೆ. ಸಂಪನ್ಮೂಲ ಕ್ರೋಢಿಕರಣ ಮತ್ತು ಪತ್ರಿಕೆಗಳು, ವಿದ್ಯುನ್ಮಾನ ಹಾಗೂ ಸಾಮಾಜಿಕ ಮಾಧ್ಯಮಗಳಿಗೆ ಪ್ರಚಾರ ಸಾಮಗ್ರಿಗಳನ್ನು ಸಿದ್ಧ ಪಡಿಸುವಲ್ಲಿ ತನ್ನ ಎಲ್ಲಾ ಶಕ್ತಿಯನ್ನು ವಿನಿಯೋಗಿಸುತ್ತಿವೆ. ಚುನಾವಣಾ ಸಮಯದಲ್ಲಿ ಒಳ್ಳೆಯ ಉದ್ದೇಶ ಹೊಂದಿದ ಹಲವರು ರಾಜಕೀಯದತ್ತ ಗಮನ ಹರಿಸುತ್ತಾರೆ. ಇದೊಂದು ಸಕಾರಾತ್ಮಕ ಬೆಳವಣಿಗೆ. ರಾಷ್ಟ್ರ ನಿರ್ಮಾಣಕ್ಕೆ ತಮ್ಮ ಕಾಣಿಕೆ ನೀಡುವ ಭಾವನೆಗಳಿಂದ ಪ್ರಭಾವಿತರಾಗುತ್ತಾರೆ. ಚಿತ್ರ ನಟರು, ಕ್ರೀಡಾಪಟುಗಳು, ಸಾಧಕರು ತಮ್ಮ ಪಕ್ಷಕ್ಕೆ ಸೇರಬೇಕು ಹಾಗೂ ಕೆಲವು ಸಂದರ್ಭಗಳಲ್ಲಿ ಪಕ್ಷದ ಅಭ್ಯರ್ಥಿಗಳಾಗಬೇಕು ಎಂದು ಪಕ್ಷಗಳು ಅವರ ಮನವೊಲಿಸುತ್ತವೆ. ಆದ್ದರಿಂದ ಹಲವರು ಪಕ್ಷದಿಂದ ಪಕ್ಷಕ್ಕೆ ಹಾರುತ್ತಾರೆ. ಚುನಾವಣೆಗೆ ಮುನ್ನ ಪಕ್ಷಾಂತರ ಮಾಡುವ ಈ ಅವಧಿಯಲ್ಲಿ ರಾಜಕೀಯ ಶಕ್ತಿಗಳ ಪುನರ್ವಿಂಗಡಣೆ ಆಗುತ್ತದೆ.

ಸ್ವಚ್ಛಂದ ರಾಜಕಾರಣಿಗಳಿಗೆ ಚುನಾವಣೆಗಳು ಒಳ್ಳೆಯ ಅವಕಾಶ ಕಲ್ಪಿಸಿಕೊಡುತ್ತವೆ. ಸ್ವಚ್ಛಂದ ರಾಜಕಾರಣಿಯ ಆಲೋಚನೆಗಳು ಮತ್ತು ಕ್ರಿಯೆಗಳು ಸ್ವತಂತ್ರವಾಗಿರುತ್ತವೆ. ಆತನಲ್ಲಿ ಸಾಂಪ್ರದಾಯಿಕ ನಿಯಮಗಳು ದುರ್ಲಭ. ಆತ ಸಾಮಾನ್ಯ ಮನೋಭಾವದ ವ್ಯಕ್ತಿಯಲ್ಲ. ಆತ ತೀಕ್ಷ್ಣಮತಿ ಹಾಗೂ ಕೆಲವೊಮ್ಮೆ ಪರಕೀಯನಂತೆ ವರ್ತಿಸುತ್ತಾನೆ. ತನ್ನತ್ತ ಎಲ್ಲರ ಗಮನ ಸೆಳೆಯುವ ಪ್ರತಿಯೊಂದು ಉಪಾಯ ಬಲ್ಲವನಾಗಿರುತ್ತಾನೆ. ಗಮನ ಸೆಳೆಯುವುದು ಮತ್ತು ಪ್ರಚಾರ ಗಿಟ್ಟಿಸಿಕೊಳ್ಳುವುದು ಅವನ ಸ್ವಭಾವ. ನಿರರ್ಗಳವಾಗಿ ನಿಲುವು ಬದಲಿಸುವಲ್ಲಿ ಆತನಿಗೆ ಹಿಂಜರಿಕೆ ಕಾಣದು. ಸಾಂಪ್ರದಾಯಿಕ ರಾಜಕಾರಣಿಗಿಂತಲೂ ಹೆಚ್ಚು ವರ್ಣರಂಜಿತವಾಗಿ ಮಾತನಾಡಬಲ್ಲ ಈತನನ್ನು ಸುದ್ದಿ ವಾಹಿನಿಗಳು ಹೆಚ್ಚು ಬಯಸುತ್ತಾರೆ. ಟ್ವಿಟರ್‌ನಂತಹ ಸಾಮಾಜಿಕ ಮಾಧ್ಯಮಗಳು ಸ್ವಚ್ಛಂದ ರಾಜಕಾರಣಿಯ ವಿಚಾರಗಳಿಗೆ ಹೆಚ್ಚಿನ ಸ್ಥಳಾವಕಾಶ ಕಲ್ಪಿಸುತ್ತವೆ. ಸ್ವಚ್ಛಂದ ರಾಜಕಾರಣಿಗಳಲ್ಲಿ ಹಲವರು ಲೋಕಕಲ್ಯಾಣದ ವಿಚಾರಕ್ಕೆ ಕಟಿಬದ್ಧರಾಗಿ ಸಿದ್ಧಾಂತವನ್ನು ಹೆಣೆಯುತ್ತಾರೆ ಮತ್ತು ಜನಾಭಿರುಚಿಯ ವಿಚಾರಗಳ ಅನ್ವೇಷಣೆಯಲ್ಲಿತ್ತಾರೆ.

ಸ್ವಚ್ಛಂದ ರಾಜಕಾರಣಿ ಅಥವಾ ಮೆವರಿಕ್ ಎಂಬ ಆಂಗ್ಲ ಪದ ಉದ್ಭವಿಸಿದ್ದು ಸ್ಯಾಮ್ಯುಯೆಲ್ ಅಗಸ್ಟಾ ಮೆವರಿಕ್ ಎಂಬ 19ನೇ ಶತಮಾನದ ದಕ್ಷಿಣ ಕೆರೊಲಿನ ಪ್ರಾಂತ್ಯದ ಜಮೀನುದಾರ ಹಾಗೂ ಶಾಸಕನಿಂದ. ಜಮೀನುದಾರ ಕುಟುಂಬದಿಂದ ಬಂದ ಈತ ತನ್ನ ತಂದೆಯ ವಹಿವಾಟನ್ನು ನೋಡಿಕೊಳ್ಳುತ್ತ ಕಾನೂನು ವಿಷಯದಲ್ಲಿ ವ್ಯಾಸಂಗ ಮಾಡಿದ ನಂತರ ವಕೀಲರ ಕಚೇರಿಯನ್ನು ತೆರೆದಿದ್ದ. ಟೆಕ್ಸಾಸ್ ಕ್ರಾಂತಿಯ ಸಂದರ್ಭದಲ್ಲಿ ಈತನನ್ನು ಗೃಹಬಂಧನದಲ್ಲಿ ಇಡಲಾಗಿತ್ತು. ಟೆಕ್ಸಾಸ್ ಮಹಾಪೌರನಾಗಿ ಸೇವೆ ಸಲ್ಲಿಸಿದ್ದ ಈತ ವಿವಿಧ ಹುದ್ದೆಗಳನ್ನು ನಿರ್ವಹಿಸಿದ್ದ. ಈತನ ಬಳಿ ಗೋವುಗಳ ಸಣ್ಣ ದಿಂಡಿತ್ತು. ಅವು ಮನಬಂದಂತೆ ಸ್ವಚ್ಛಂದ ಜೀವನ ನಡೆಸುತ್ತಿದ್ದವು. ಅವುಗಳನ್ನು

ಮೆವರಿಕ್ ಹಸುಗಳೆಂದು ಕರೆಯಲಾಗುತ್ತಿತ್ತು. ಅಂದಿನಿಂದ ಹಚ್ಚೆಯಿಲ್ಲದ ಹಸುಗಳನ್ನು ಮೆವರಿಕ್ ಎಂದು ಕರೆಯುವ ಪರಿಪಾಠ ಬೆಳೆಯಿತು.

ಭಾರತವು ತನ್ನದೇ ಆದ ಸ್ವಚ್ಛಂದ ರಾಜಕಾರಣಿಗಳನ್ನು ಅಂದರೆ ಮೆವರಿಕ್‌ಗಳನ್ನು ಹೊಂದಿದೆ. ಮುಕ್ತ ಆಲೋಚನೆಗಳನ್ನು ಹೊಂದಿದ ಹಲವರು ರಾಜಕೀಯ ಪಕ್ಷಗಳನ್ನು ತಾತ್ಕಾಲಿಕವಾಗಿ ಸೇರುತ್ತಾರೆ ಮತ್ತು ಅದಕ್ಕೆ ಒಗ್ಗಲು ವಿಫಲರಾಗುತ್ತಾರೆ. ಇವರಲ್ಲಿ ಕೆಲವರು ತಮ್ಮದೆ ಪಕ್ಷವನ್ನು ಕಟ್ಟಿದ್ದಾರೆ. ಅಸಂಪ್ರಾಯಿಕ ಶೈಲಿಯಲ್ಲಿ ಕಾರ್ಯವಹಿಸುತ್ತಾರೆ. ಗರಿಷ್ಠ ಪ್ರಚಾರಗಿಟ್ಟಿಸಿಕೊಳ್ಳಲು ತಮ್ಮದೇ ಭಾಷಾ ವೈಶಿಷ್ಟ್ಯವನ್ನು ರೂಢಿಸಿಕೊಂಡು ವಾದ ಮಂಡಿಸುತ್ತಾರೆ. ನಿರಾಧಾರ ಆರೋಪಗಳನ್ನು ಹೊರಿಸುವ ಅಭ್ಯಾಸವನ್ನು ಮೆವರಿಕ್‌ಗಳು ಬೆಳೆಸಿಕೊಳ್ಳುತ್ತಾರೆ. ಮೆವರಿಕ್‌ಗಳು ಅವಹೇಳನಕಾರಿ ಹೇಳಿಕೆಗಳನ್ನು ನೀಡುವ ಸ್ವಭಾವ ಬೆಳೆಸಿಕೊಳ್ಳುವುದರಿಂದ ಸಂಪ್ರದಾಯಸ್ತ ರಾಜಕಾರಣಿಗಳು ಅವರೊಂದಿಗೆ ವಿಚಾರ ಮಂಥನ ಮಾಡಲು ಬಯಸುವುದಿಲ್ಲ. ಅವರ ನಡತೆ ಸ್ವಚ್ಛಂದವಾಗಿರುತ್ತದೆ.

ಮೆವರಿಕ್‌ಗಳೊಂದಿಗೆ ನಡೆದುಕೊಳ್ಳುವ ಬಗೆ ಹೇಗೆ ಎಂದು ನಾನು ಸದಾ ಆಲೋಚಿಸುತ್ತೇನೆ. ಮೆವರಿಕ್‌ಗಳು ಕೇಳುವ ಪ್ರಶ್ನೆಗಳಿಗೆ ಉತ್ತರಿಸುವುದು ಸೂಕ್ತವೇ? ಮನೆ ಬಾಗಿಲನ್ನು ನೂಕಿ ನುಸುಳುವ ಆತನನ್ನು ಭೇಟಿ ಮಾಡಬಹುದೆ? ಆತನನ್ನು ಎದುರಿಸಿ ಮುಖ್ಯ ವೇದಿಕೆ ಅಲಂಕರಿಸುವ ಅವಕಾಶ ಆತನಿಗೆ ನೀಡಬೇಕೆ ಅಥವಾ ಆತನನ್ನು ಗಮನಿಸಿದೆ, ನಮ್ಮ ಸಾಂಪ್ರದಾಯಿಕ ಶೈಲಿಯ ರಾಜಕಾರಣ ಮುಂದುವರಿಸಿಕೊಂಡು ವಿಚಾರಗಳಿಗೆ ಮಾನ್ಯತೆ ನೀಡಬೇಕೆ? ಹೀಗೆ ಮಾಡುವುದೇ ಕ್ಷೇಮ. ಮೆವರಿಕ್‌ಗಳ ಮಿಚಾರದಲ್ಲಿ ಮೌನವೇ ಸರಿಯಾದ ಪ್ರತಿಕ್ರಿಯೆ. ಮೌನ ಗೌರವಯುತವಾಗಿದೆ. ಮೆವರಿಕ್ ತನ್ನ ವಿಚಿತ್ರ ವಿಚಾರಗಳಿಂದ ನಿಮ್ಮ ಘತನೆಗೆ ಚ್ಯುತಿ ತರುವುದನ್ನು ತಪ್ಪಿಸಿಕೊಳ್ಳಲು ಇದುವೇ ಸರಿಯಾದ ಮಾರ್ಗ.

ಅರವಿಂದ್ ಕೇಜ್ರಿವಾಲ್ ಅವರಿಗೆ ಸಂದರ್ಶನ ನೀಡಲು ನೀರಾಕರಿಸಿದ ನರೇಂದ್ರ ಮೋದಿ ಸರಿಯಾದ ಸಲಹೆಯನ್ನೆ ಅನುಸರಿಸಿದ್ದಾರೆ.

✲✲✲✲✲